# ಮದುವೆಯಾಚೆಯ ಸಂಸಾರ!



ಮದುವೆಯಾಚೆಗಿನ ಸಂಬಂಧವನ್ನು ನಮ್ಮ ಸಮಾಜ ಒಪ್ಪಿಕೊಳ್ಳುವುದಿಲ್ಲ. ಆದರೆ ಅಂಥ ಸಂಬಂಧಗಳು ನಮ್ಮ ನಡುವೆಯೇ ಸಾಕಷ್ಟು ಇರುತ್ತವೆ. ಹಾಗಾದರೆ ಮದುವೆಯಾಚೆಗಿನ ಸಂಬಂಧದ ಹೊಣೆಗಾರಿಕೆ ಪುರುಷನಿಗೆ ಇರುವುದಿಲ್ಲವೇ? ಆ ಸಂಬಂಧದಿಂದ ಹುಟ್ಟಿದ ಮಕ್ಕಳು ಜೀವನನಿರ್ವಹಣೆಗೆ ತಂದೆಯ ನೆರವನ್ನು ಕೋರುವುದು ಕಾನೂನು ಸಮ್ಮತವೇ?

■ **ಸೌಮ್ಯಲಕ್ಷ್ಮೀ ಕುಕ್ಕಜೆ**
**ನ್ಯಾಯವಾದಿ**

ಹಲವು ವರ್ಷಗಳ ಹಿಂದೆ, ನನ್ನ ಮೊದಲ ಕಕ್ಷಿಗಾರರಲ್ಲಿ ಒಬ್ಬರು ಈಕೆ. 'ಮಕ್ಕಳಿಬ್ಬರೂ ಶಾಲೆಗೆ ಹೋಗಿರುವ ಸಮಯದಲ್ಲೇ ನನಗೆ ಬರಲು ಆಗುವುದು, ಬೆಳಿಗ್ಗೆಯೇ ಬರಲೇ?' ಅಂತ ಫೋನ್‌ನಲ್ಲಿ ಕೇಳಿದ್ದಳು. ಬಹಳ ಆತ್ಮಸ್ಥೈರ್ಯದ ಹೆಂಗಸು ಎಂದು ಮೊದಲ ಭೇಟಿಯಲ್ಲೇ ತಿಳಿಯಿತು. ಇನ್ನೂ ಚಿಕ್ಕವಯಸ್ಸಿನ ನೀಲಿಮಾ (ಹೆಸರು ಬದಲಾಯಿಸಲಾಗಿದೆ), ಒಳ್ಳೆಯ ಉದ್ಯೋಗದಲ್ಲಿಯೂ ಇದ್ದು, ಇತ್ತೀಚೆಗೆ ಇದ್ದಕ್ಕಿದ್ದಂತೆ ಬದಲಾದ ಕಂಪನಿ ಪಾಲಿಸಿಯಿಂದಾಗಿ ಕೆಲಸ ಕಳೆದುಕೊಂಡಿದ್ದಳು.

ಉದ್ಯೋಗದ ಸ್ಥಳದಲ್ಲಿ ಆಕೆಯಿಂದ ಬಹಳ ಸೀನಿಯರ್ ಹಾಗೂ ವಿವಾಹಿತ ಉದ್ಯೋಗಿಯೊಂದಿಗೆ ಸಂಬಂಧವಾಗಿ, ಅವರು ಮದುವೆಯಾಗಿದ್ದರು. ಆತನಿಗೆ ಅದು ಎರಡನೇ ಮದುವೆ. ಇವರಿಗೆ ಇಬ್ಬರು ಪುಟ್ಟ ಮಕ್ಕಳಿದ್ದರು. ನೀಲಿಮಾಳ ಗಂಡ ಇವರೊಂದಿಗೆ ಚೆನ್ನಾಗಿಯೇ ಇದ್ದವನು, ಇದ್ದಕ್ಕಿದ್ದಂತೆ ಬರುವುದನ್ನೂ ನಿಲ್ಲಿಸಿಬಿಟ್ಟ. 'ಮಕ್ಕಳನ್ನು ನೋಡಿಕೊಳ್ಳಲು ಹಣದ ಸಹಾಯವನ್ನಾದರೂ ಮಾಡು' ಎಂದು ನೀಲಿಮಾ ಆತನನ್ನು ಕೇಳಿದ ಮೇಲೆ, ಆತ ಈಕೆಯ ಫೋನ್ ಕರೆಗೆ ಉತ್ತರಿಸುವುದನ್ನೂ ನಿಲ್ಲಿಸಿದ್ದ. 'ಏನಾದರೂ ಮಾಡಬಹುದೇ' ಅಂತ ನೀಲಿಮಾ ನನ್ನನ್ನು ಕೇಳಿದಾಗ, ತಡೆಯಲಾಗದ ಸಿಟ್ಟು ಅವಳ ಮುಖದಲ್ಲಿದ್ದುದನ್ನು ನಾನು ಗಮನಿಸಿದೆ.

## ಇದು ವಂಚನೆಯೇ?

ಹೌದು, ಇಬ್ಬರೂ ಸೇರಿ ಹೂಡಿದ ಸಂಸಾರದ ಜವಾಬ್ದಾರಿಯನ್ನು ಪೂರ್ತಿಯಾಗಿ ಅವಳ ಮೇಲಷ್ಟೇ ಹಾಕಿ ಮುಖ ತಿರುಗಿಸಿಕೊಂಡದ್ದು ವಂಚನೆಯೇ. ಸುಖ ಸಂಸಾರದ ಆಸೆ ತೋರಿಸಿ ಲೈಂಗಿಕ ಸಂಬಂಧ ಇಟ್ಟುಕೊಂಡರೆ, ಅವಳ ಒಪ್ಪಿಗೆಯನ್ನು ಪೂರ್ಣ ಮನಸ್ಸಿನಿಂದ ಕೊಟ್ಟ ಒಪ್ಪಿಗೆಯೆಂದು ಬಗೆಯಬಹುದೇ? ಅಥವಾ ಇದನ್ನು ಬಲಾತ್ಕಾರ (ರೇಪ್) ಎನ್ನಬೇಕೇ? ಇದು ಕಾನೂನಿನ ಸೂಕ್ಷ್ಮ! 'ನನ್ನ ಪ್ರಕಾರ, ಇದು ವಂಚನೆ ಹೌದಷ್ಟೆ; ರೇಪ್ ಆಗಲಾರದು' ಎಂದಿದ್ದೆ.

'ಕ್ರಿಮಿನಲ್ ಕೇಸ್ ಮಾಡಬಹುದೇ? ಎರಡನೇ ಹೆಂಡತಿಯಾದ ತನಗೆ ಆ ಹಕ್ಕು ಇದೆಯೇ?' ಎಂದು ಕೇಳಿದ್ದಳು.

'ವಂಚನೆ (ಚೀಟಿಂಗ್) ಕೇಸ್ ಮಾಡಬಹುದು. ಆದರೆ ಪೊಲೀಸರು ಇದನ್ನು ಸಂಸಾರದ ವಿಷಯ ಎಂದು ನೋಡ್ತಾರೆಯೇ ಹೊರತು, ಕ್ರಿಮಿನಲ್ ಕೇಸ್ ಆಗಿ ನೋಡುವುದಿಲ್ಲ. ಸುಮ್ಮನೇ ನೀವು ಪೊಲೀಸ್ ಸ್ಟೇಷನ್ ಅಲೆಯೋ ಹಾಗೆ ಆಗಬಹುದು. ಅಲ್ಲದೇ, ನಿಮಗೆ ಈಗ ಬೇಕಾದ್ದು ಏನು ಎಂಬುದನ್ನು ನೀವು ನಿರ್ಧರಿಸಬೇಕು' – ಹೀಗೆ ನಾನು ಹೇಳಿದ ಮೇಲೆ ನಮ್ಮ ನಡುವೆ ಸುಮಾರು ಎರಡು ಗಂಟೆ ಕಾಲ ಮಾತುಕತೆ ನಡೆಯಿತು.

ಮುಂದೆ, ನ್ಯಾಯಾಲಯದಲ್ಲಿ ದಾವೆ ಹೂಡಿದಾಗ, 'ತನಗಾಗಿ ಏನೂ ಬೇಡ' ಎಂದಳು ನೀಲಿಮಾ. ಸಿ.ಆರ್.ಪಿ.ಸಿ.ಯ ಸೆ.125ರ ಅಡಿಯಲ್ಲಿ, 'ಕಾನೂನು ಸಮ್ಮತವಲ್ಲದ ಮಕ್ಕಳಾದರೂ, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ತಂದೆಯದ್ದು' ಎಂಬುದಾಗಿ ದಾವೆ ಹೂಡಿ, ಆ ದಾವೆಯಲ್ಲಿ ನಮಗೆ ಗೆಲುವಾಯಿತು. ಆತ ಮಕ್ಕಳ ಜೀವನಾಂಶಕ್ಕೆ, ಶಿಕ್ಷಣಕ್ಕೆ ಬೇಕಾದ ಹಣವನ್ನು ಒದಗಿಸಬೇಕು ಎಂಬ ಆದೇಶವಾಯಿತು. ಆತ ಸರ್ಕಾರಿ ನೌಕರಿಯಲ್ಲಿದ್ದ ಕಾರಣ, ಮಕ್ಕಳ ಜೀವನಾಂಶದ ಹಣವನ್ನು, ನೇರವಾಗಿ ಅವನ ಸಂಬಳದಿಂದಲೇ ಅವರಿಗೆ ಬರುವಂತೆ ಮಾಡಬೇಕೆಂಬ ಆದೇಶವನ್ನೂ ನ್ಯಾಯಾಲಯದಿಂದ ತಂದೆವು. ಈ ದಾವೆಯ ಪ್ರಕ್ರಿಯೆಯಲ್ಲಿ ಹೈಕೋರ್ಟ್ ನ್ಯಾಯಾಧೀಶರೂ ಸೇರಿದಂತೆ ಹಲವರಿಗೆ ಈ ಕಾನೂನಿನ ಅರಿವು ಇರಲಿಲ್ಲ ಎಂಬುದು ನಮಗೆ ತಿಳಿಯಿತು! ಕೆಲವರಿಗೆ,